# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 523(591) |
| 2. | ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | : | 22.07.2024 |
| 4. | ಉತ್ತರಿಸಬೇಕಾದ ಸಚಿವರು | : | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಜ್ಯದಲ್ಲಿರುವ ನರ್ಸಿಂಗ್ ಕಾಲೇಜುಗಳ ಒಟ್ಟು ಸಂಖ್ಯೆ ಎಷ್ಟು; (ಬಿಎಸ್‌ಸಿ ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಹಾಗೂ ಇನ್ನಿತರ ಕೋರ್ಸ್‌ಗಳು) | ರಾಜ್ಯದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಸಂಯೋಜನೆಗೊಂಡ<br>ನರ್ಸಿಂಗ್ ಕಾಲೇಜುಗಳ ಸಂಖ್ಯೆ-615<br>ಪ್ಯಾರಾ ಮೆಡಿಕಲ್ ಕಾಲೇಜುಗಳ ಸಂಖ್ಯೆ-164<br>ಫಿಜಿಯೋತೆರಪಿ ಕಾಲೇಜುಗಳ ಸಂಖ್ಯೆ-93 |
| (ಆ) | ಪ್ರಸ್ತುತ, ಇರುವ ನರ್ಸಿಂಗ್ ಕಾಲೇಜುಗಳಲ್ಲಿ ಎಷ್ಟು ಕಾಲೇಜು ಕೆಎಂಸಿ ಮತ್ತು ಐಎನ್‌ಸಿ ಅನುಮತಿ ಪಡೆದಿವೆ: (ಪೂರ್ಣ ವಿವರ ಒದಗಿಸುವುದು) | ಕೆಎನ್‌ಸಿ ವೆಬ್ ಸೈಟ್ ಪ್ರಕಾರ 2023-24ನೇ ಸಾಲಿಗೆ ಅನುಮತಿ ಪಡೆದಿರುವ ಒಟ್ಟು ನರ್ಸಿಂಗ್ ಕಾಲೇಜುಗಳ ಸಂಖ್ಯೆ-592. ನಿಯಮಾವಳಿಗಳ ಪ್ರಕಾರ ಐ.ಎನ್.ಸಿ, ಮಾನ್ಯತೆ ಪಡೆಯುವುದು ಕಡ್ಡಾಯವಿರುವುದಿಲ್ಲ. |
| (ಇ) | ನರ್ಸಿಂಗ್ ಕಾಲೇಜು ಹೊಂದಿರುವವರು ಕಡ್ಡಾಯವಾಗಿ 100 ಬೆಡ್‌ಗಳ ಸ್ವಂತ ಆಸ್ಪತ್ರೆ ಹೊಂದಿರಬೇಕೆಂಬ ನಿಯಮವಿದೆಯೇ; ಹಾಗಿದ್ದಲ್ಲಿ ಎಷ್ಟು ಸಂಸ್ಥೆಗಳು ಸ್ವಂತ ಆಸ್ಪತ್ರೆಯನ್ನು ಹೊಂದಿದೆ; ಸ್ವಂತ ಆಸ್ಪತ್ರೆ ಹೊಂದಿಲ್ಲದಿದ್ದಲ್ಲಿ ಕಾಲೇಜಿನ ಮಾನ್ಯತೆಯನ್ನು ರದ್ದುಪಡಿಸಲಾಗುವುದೇ; (ಪೂರ್ಣ ವಿವರ ನೀಡುವುದು) | 2019ರ ನಂತರದಲ್ಲಿ ಸ್ಥಾಪನೆಯಾಗುವ ಕಾಲೇಜುಗಳಿಗೆ 100 ಹಾಸಿಗೆಯ ಸ್ವಂತ/ ಪೋಷಕ ಆಸ್ಪತ್ರೆ ಹೊಂದಿರಬೇಕೆಂಬ ನಿಯಮವಿರುತ್ತದೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಯದ ಸಂಯೋಜನೆಯ ಕುರಿತ ಆನ್‌ಲೈನ್ ಅರ್ಜಿಗಳ ಪ್ರಕಾರ 242 ಕಾಲೇಜುಗಳು 2019ರ ನಂತರ ಸ್ಥಾಪನೆಯಾಗಿದ್ದು, ಸದರಿ ಕಾಲೇಜುಗಳು 100 ಹಾಸಿಗೆಯ ಸ್ವಂತ/ಪೋಷಕ ಆಸ್ಪತ್ರೆ ಹೊಂದಿರಬೇಕಾಗಿರುತ್ತದೆ.<br><br>2023-24ನೇ ಶೈಕ್ಷಣಿಕ ಸಾಲಿನಲ್ಲಿ ಮೊದಲ ಹಂತದಲ್ಲಿ 75 ನರ್ಸಿಂಗ್ ಕಾಲೇಜುಗಳಲ್ಲಿ 100 ಹಾಸಿಗೆ ಹೊಂದಿರದ ಹಾಗೂ ಇತರೆ ನ್ಯೂನ್ಯತೆಗಳು ಕಂಡುಬಂದ ಕಾರಣ ಸದರಿ ಕಾಲೇಜುಗಳಿಗೆ ಹಿಂಬರಹ ನೀಡಲಾಗಿದ್ದು, ಸದರಿ ಕಾಲೇಜುಗಳ ಮಾನ್ಯತೆ ರದ್ದುಪಡಿಸುವ ಸಂಬಂಧ ಪರಿಶೀಲನೆ ಹಂತದಲ್ಲಿರುತ್ತದೆ. ಉಳಿದ ಕಾಲೇಜುಗಳ ಪರಿಶೀಲನೆ ನಡೆಸಿ, ನ್ಯೂನತೆಗಳು ಕಂಡು ಬಂದಲ್ಲಿ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲಾಗುವುದು. |
| (ಈ) | ರಾಜ್ಯದಲ್ಲಿ ಹಲವಾರು ನರ್ಸಿಂಗ್ ಕಾಲೇಜುಗಳಲ್ಲಿ ಅಗತ್ಯ ಪ್ರಮಾಣದ ಬೋಧಕ ಮತ್ತು ಪ್ರಯೋಗಾಲಯ, ಸಿಬ್ಬಂದಿ ಹಾಗೂ ಗ್ರಂಥಾಲಯ ಮತ್ತಿತರ ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2023-24ನೇ ಶೈಕ್ಷಣಿಕ ಸಾಲಿನಲ್ಲಿ ಮೊದಲ ಹಂತದಲ್ಲಿ 75 ನರ್ಸಿಂಗ್ ಕಾಲೇಜುಗಳಲ್ಲಿ ಹಲವಾರು ನ್ಯೂನ್ಯತೆಗಳು ಕಂಡುಬಂದ ಹಿನ್ನೆಲೆಯಲ್ಲಿ ಹಿಂಬರಹ ನೀಡಲಾಗಿದ್ದು, 2024-25ನೇ ಸಾಲಿನಿಂದ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳದಂತೆ ಸೂಚಿಸಲಾಗಿದೆ. |
| (ಉ) | ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಗಮನಕ್ಕೆ ಬಂದಿಲ್ಲ. ಈ ಕುರಿತು ಮುಂಬರುವ ಸ್ಥಳೀಯ ತಪಾಸಣೆಯ ಸಂದರ್ಭದಲ್ಲಿ ಮೂಲಭೂತ ಸೌಕರ್ಯ ಕೊರತೆಯ ಬಗ್ಗೆ ಪರಿಶೀಲಿಸಿ, ವರದಿಗಳನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಯದ ಶೈಕ್ಷಣಿಕ ಪರಿಷತ್ತು ಸಮಿತಿ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಮುಂದಿನ ಅಗತ್ಯ ಕ್ರಮ ಜರುಗಿಸಲಾಗುವುದು. |

**ಸಂಖ್ಯೆ:** ಎಂಇಡಿ 373 ಎಂಎಸ್‌ಎಫ್ 2024

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು